ಎಸ್.ಡಿ.ಎಸ್. ಕ್ಷಯ ರೋಗ ಸಂಶೋಧನಾ ಕೇಂದ್ರ ಮತ್ತು
ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ
SDS Tuberculosis Research Centre and
Rajiv Gandhi Institute of Chest Diseases
(An Autonomous Institute, Government of Karnataka)
Reg. No.:SOR/BLU/DR/671/09-10 dated 23-09-2009

ಎಸ್‌ಡಿಎಸ್/ನೇಮಕಾತಿ(ಹೈಕ)/01/2016-17 ದಿನಾಂಕ: 31/07/2017

## ಅಧಿಸೂಚನೆ

ವಿಷಯ: - ಎಸ್‌ಡಿಎಸ್ ಕ್ಷಯರೋಗ ಸಂಶೋಧನಾ ಕೇಂದ್ರ ಮತ್ತು ರಾಜೀವ್‌ಗಾಂಧಿ ಎದೆರೋಗಗಳ ಸಂಸ್ಥೆ, ಬೆಂಗಳೂರು ಇಲ್ಲಿ ಹೈದರಾಬಾದ್ ಕರ್ನಾಟಕ ಪ್ರಾಂತೀಯ ಅಭ್ಯರ್ಥಿಗಳಿಗಾಗಿ ಗುರುತಿಸಲಾಗಿರುವ ವಿವಿಧ ವೃಂದದ ಹುದ್ದೆಗಳನ್ನು ವಾಕ್-ಇನ್-ಇಂಟರ್‌ವ್ಯೂ ಮುಖಾಂತರ ಭರ್ತಿ ಮಾಡುವ ಸಲುವಾಗಿ ತಾತ್ಕಾಲಿಕ ಪ್ರತಿಕ್ಷಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ

ಉಲ್ಲೇಖ: - 1) ಅಧಿಸೂಚನೆ ಸಂಖ್ಯೆ ಎಸ್‌ಡಿಎಸ್/ನೇಮಕಾತಿ (ಹೈಕ) / 01 /2016-17 ದಿನಾಂಕ 03/04/2017
2) ಆಯ್ಕೆ ಸಮಿತಿಯ ನಡಾವಳಿ ದಿನಾಂಕ 28/04/2017

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಸಂಸ್ಥೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರಾಂತೀಯ ಅಭ್ಯರ್ಥಿಗಳಿಗಾಗಿ ಗುರುತಿಸಲಾಗಿರುವ ವಿವಿಧ ವೃಂದದ ಹುದ್ದೆಗಳನ್ನು ವಾಕ್-ಇನ್-ಇಂಟರ್‌ವ್ಯೂ ಮುಖಾಂತರ ಭರ್ತಿ ಮಾಡುವ ಸಲುವಾಗಿ ಉಲ್ಲೇಖಿತ ಅಧಿಸೂಚನೆಯ ದಿನಾಂಕದಂದು ಪ್ರಕಟಣೆ ನೀಡಲಾಗಿತ್ತು. ಈ ಪ್ರಕಟಣೆಯ ಅನುಸಾರ ದಿನಾಂಕ 27/04/2017 ಮತ್ತು 28/04/2017 ರಂದು ವಾಕ್-ಇನ್-ಇಂಟರ್‌ವ್ಯೂ ಮುಖಾಂತರ ಸಂದರ್ಶನ ನಡೆಸಲು ಕ್ರಮಕೈಗೊಳ್ಳಲಾಯಿತು.

ಈ ಸಂದರ್ಶನಕ್ಕೆ ಹಾಜರಾಗಿ ದಾಖಲಾತಿಗಳು ಕ್ರಮ ಬದ್ಧವಾಗಿದ್ದ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ನಡೆಸಲಾಗಿದ್ದು ವಿವಿಧ ವೃಂದದ ಹುದ್ದೆಗಳಿಗೆ ನಿಗಧಿಪಡಿಸಲಾಗಿದ್ದ ವಿದ್ಯಾರ್ಹತೆಯ ಶೇಖಡವಾರು ಅಂಕ (Prorate) ಮತ್ತು ಈ ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಹಾಗೂ ವಾಹನ ಚಾಲಕರ ಹುದ್ದೆಗೆ ಹಾಜರಾದ ಅಭ್ಯರ್ಥಿಗಳನ್ನು ಹಿರಿಯ ಮೋಟಾರ್ ವಾಹನ ನಿರೀಕ್ಷಕರು, ಪ್ರಾದೇಶಿಕ ಸಾರಿಗೆ ಇಲಾಖೆ, ಬೆಂಗಳೂರು ಇವರು ನೀಡಿರುವ ಅಂಕಗಳ ಆಧಾರದನ್ವಯ ಆಯ್ಕೆ ಮಾಡಲಾಗಿದ್ದು ಮೀಸಲಾತಿ ಹಾಗೂ ಒಳ ಮೀಸಲಾತಿ ನಿಯಮದಂತೆ ತಾತ್ಕಾಲಿಕ ಪ್ರತೀಕ್ಷಾ ಪಟ್ಟಿಯನ್ನು (Provisional Waiting List) ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಪ್ರತೀಕ್ಷಾ ಪಟ್ಟಿಯಿಂದ ಬಾಧಿತರಾಗುವ ಅಭ್ಯರ್ಥಿಗಳು ಯಾವುದಾದರು ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ದಾಖಲೆಗಳ ಸಮೇತ ಈ ಅಧಿಸೂಚನೆ ಪತ್ರದ ದಿನಾಂಕದಿಂದ 15 ದಿನಗಳೊಳಗಾಗಿ ನಿರ್ದೇಶಕರು, ಎಸ್‌ಡಿಎಸ್ ಕ್ಷಯರೋಗ ಸಂಶೋಧನಾ ಕೇಂದ್ರ ಮತ್ತು ರಾಜೀವ್‌ಗಾಂಧಿ ಎದೆರೋಗಗಳ ಸಂಸ್ಥೆ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು, ನಿಗಧಿತ ಸಮಯದ ನಂತರ ಸಲ್ಲಿಸಲಾಗುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸೋಮೇಶ್ವರನಗರ 1ನೇ ಮುಖ್ಯರಸ್ತೆ, ಧರ್ಮರಾಮ್ ಕಾಲೇಜು ಅಂಚೆ (ನಿಮ್ಹಾನ್ಸ್ ಹತ್ತಿರ), ಬೆಂಗಳೂರು-560 029
Someshwaranagara 1st Main Road, Dharmaram College Post (Near NIMHANS), Bangalore - 560 029.
Ph: 080-26632634 Telefax: 080-26631923 email:sdstbrgicd@gmail.com, director.rgicd@gmail.com